"ಸಂಬಂಧ! ಹಾಗೆಂದರೇನು? ಅದು ನಾವು ಮಾಡಿಕೊಳ್ಳುವುದು. ಬೇಡವಾದಾಗ ಬಿಡೋದು ಅದೇ ಅಲ್ವಾ? ಅಮಾವಾಸ್ಯೆಯ ಕತ್ತಲಲ್ಲಿ, ನಂಬಿಸಲು ಕರಿಮಣಿ ಕಟ್ಟಿ ಒಂದೆರಡು ಬಾರಿ ಹಾಸಿಗೆಯಲ್ಲಿ ಮಲಗಿ, ಜೀವನದಲ್ಲಿ ಯಾವ ಭದ್ರತೆಯನ್ನು ಕೊಡದೆ, ನಡೆದದ್ದು ಮದ್ವೇನೇ ಅಲ್ಲಾಂತ ಮತ್ತೊಂದು ಮದ್ವೆ ಮಾಡಿಕೊಂಡು ಸುಖವಾಗಿ ಸಭ್ಯನಂತೆ ಸೋಗು ಹಾಕಿ ಬದುಕಲು ಅವನಿಗೆ ಯಾವ ಹಕ್ಕಿದೆ? ಅವನು ಒಂದು ಬಾರಿಯಾದರೂ ಗೀತಾಳನ್ನು ಕೈಹಿಡಿದು ಕರೆದುಕೊಂಡು ಹೋಗಿ ತನ್ನ 'ಹೆಂಡತೀಂತಾ' ಮನೆಯಲ್ಲಿ ಹೇಳಿದ್ದರೆ ಇವನು ಅತ್ತಿಗೇಂತಾ ಭಾವಿಸುತ್ತಿದ್ದ. ವೇಶ್ಯೆಯ ಬಳಿಗೆ ಬಂದುಹೋದ ಹಾಗೆ ಬಂದವನನ್ನು ಹೇಗೆ ಗಂಡಾಂತ ಹೇಳ್ತೀಯಾ? ಅಸಹಾಯಕ ಹೆಣ್ಣೆಂದು ತಿಳಿದು, ಸಾಯುತ್ತಿದ್ದವಳನ್ನು ಉಳಿಸಿ, ಸಮಾಜದಲ್ಲಿ ಅವಳಿಗೆ ಒಂದು ಅಮೂಲ್ಯ ಸ್ಥಾನ ಕೊಟ್ಟ ದಿವಾಕರ ಅಪರಾಧೀನಾ?..."

"ಸರ್..."

"ಅವನು ನೆಲಕ್ಕೆ ಹಾಕಿ ಹೊಸಕಿ ಹೋದುದನ್ನು ಹಗುರಾಗಿ ಎತ್ತಿ ಹಿಡಿದು ಸಾಮಾಜಿಕ ಭದ್ರತೆ, ಆರ್ಥಿಕ ಭದ್ರತೆ, ತಾಯ್ತನ ಹೆಣ್ತನದ ಸುಖವನ್ನು ಪ್ರೀತಿಯಿಂದ ಇಷ್ಟು ವರ್ಷಗಳು ನೀಡುತ್ತಾ ಬಂದಿದ್ದಾನಲ್ಲ ದಿವಾಕರ ನನ್ನ ಮಟ್ಟಿಗೆ ಅವನೇ ಅವಳ ನಿಜವಾದ ಪತಿ... ನನಗಂತೂ ಪುರುಷರಲ್ಲಿ ಇಂತಹವರೂ ಇದ್ದಾರೇಂತ ನಿನ್ನ ಬಳಿ ಜಾಸ್ತಿ ಹೇಳಿಕೊಂಡರೆ... ಗೇಲಿ ಮಾಡ್ತೀಯಾ, ನನಗೆ ನಿಜಕ್ಕೂ ಅವನ ಬಗ್ಗೆ ಹೆಮ್ಮೆ..."

ವಿಜಯಾ ಎಲ್ಲವನ್ನು ಕೇಳುತ್ತಾ ಮೂಕಳಂತೆ ನಿಂತಿದ್ದಳು.

ನಾವು ಮಾನವರು, ನಾಗರಿಕರು. ಪ್ರಾಣಿಗಿಂತ ಎಷ್ಟೋ ಮೇಲ್ಪಟ್ಟವರೂಂತ ಪ್ರಾಣಿಗಳಿಗೂ ನಮಗೂ ಇರುವ ಅಂತರ, ಅದೆಂದರೆ ಮನಸ್ಸು ಅದ್ಭುತವಾದದ್ದು... ಸಾಗರದಂತೆ ನಿಗೂಢವಾದದ್ದು... ಆಳ ಕಲ್ಪನೆಯ ನೆಲೆಗೆ ನಿಲುಕದ್ದು. ಬಾನಿನಂತೆ ವಿಶಾಲವಾದದ್ದು... ಹತ್ತಿರ ಹತ್ತಿರ ಹೋದಷ್ಟು ಶೂನ್ಯದಂತೆ ಕಾಣಲು ಎತ್ತರಕ್ಕೆ ಒಮ್ಮೆಲೆ ಒಯ್ದು ಬಿಡುವ ಯಾರು? ಎಂದು ಹುಡುಕುವ ಮೊದಲೇ ಅನೇಕ ಚಟುವಟಿಕೆಗಳ ಮೂಲಕ ನನ್ನ ಇರುವನ್ನು ತೋರಿಸುವ ತನ್ನದೇ ಆದ ಭಾವನೆಗಳಿಗೆ ಸ್ಪಂದಿಸುವ ಈ ಮನಸ್ಸು ನಿಜಕ್ಕೂ ಒಂದು ಮಾನಸ ಸರೋವರ.

ಅನೇಕ ಘೋರ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸುವವರೇ ಒಮ್ಮೊಮ್ಮೆ ಕ್ಷುಲ್ಲಕ ಕಾರಣಕ್ಕಾಗಿ ಧೃತಿಗೆಟ್ಟವರಂತೆ ಕುಳಿತುಬಿಡುವುದಿಲ್ಲವೇ? ಈ ಸರೋವರದಲ್ಲಿ ಏಳುವ ಅಲೆಗಳು ವಿಭ್ರಮೆಗಳತ್ತ ಒಯ್ಯುವ ಮೆಟ್ಟಿಲುಗಳು.

ಸಿಗ್ಮೆಂಡ್ ಫ್ರಾಯಿಡ್ ಅದಕ್ಕೇ ಅಲ್ಲವೆ ಹೇಳಿರುವುದು 'ಮನಸ್ಸು ನೀರಿನಲ್ಲಿ ತೇಲುವ ಹಿಮದ ಗಡ್ಡೆಯಂತೆ' ಎಂದು?

"ಏನು ಯೋಚಿಸ್ತಾ ಇದೆಯಾ ವಿಜಯಾ? ಯಾಕೆ ಇದ್ದಕ್ಕಿದ್ದ ಹಾಗೆ ಮೌನವಾಗಿ ಬಿಟ್ಟೆ?"

ಒಂದು ನೀಳವಾದ ಉಸಿರು ಬಿಟ್ಟು, "ಎಲ್ಲಾ ನಿಗೂಢ ಅನ್ನಿಸುತ್ತೆ ಸರ್" ಎಂದಳು.

"ನಿಧಾನವಾಗಿ ಸುಪ್ತ ಮನಸ್ಸಿನ ಭಾವನೆಗಳನ್ನು ಅನಾವರಣ ಮಾಡ್ತಾ ಹೋಗು. ಎಲ್ಲವೂ ಅದೆಷ್ಟು ಸೂಕ್ಷ್ಮ, ಸರಳ, ಸಹಜ ಅನ್ನಿಸುತ್ತೆ ಅಲ್ವಾ ಸ್ವೀಟಿ..."

ಎಂದಿನಂತೆ ರಾವ್ ಅವರ ಕುಚೋದ್ಯಕ್ಕೆ ಅವಳ ಮೊಂಡ ಮೂಗಿನ, ತುದಿ ಕೆಂಪೇರಲಿಲ್ಲ. ಯಾವುದೋ ನಿಗೂಢ ಲೋಕದಲ್ಲಿ ಮುಳುಗಿದವಳಂತೆ ಕುರ್ಚಿಯಲ್ಲಿ ಕುಸಿದು ಕುಳಿತಿದ್ದಳು.